# ಬ್ಯಾಗಾರ ಸಮುದಾಯದ ಸಾಮಾಜಿಕ ವ್ಯವಸ್ಥೆ

**ಆಂಜನೇಯ**

ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

## ಪ್ರಸ್ತಾವನೆ

ದೇಶದ ಯಾವುದೇ ಒಂದು ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಜೀವನ ಸ್ಥಿರವಾಗಿದೆ. ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತಿರುತ್ತದೆ. ಬದಲಾವಣೆ ಎಂಬುದು ನಿಸರ್ಗದ ನಿಯಮ; ಪ್ರತಿಯೊಬ್ಬ ವ್ಯಕ್ತಿ, ಸಮುದಾಯ ಅಥವಾ ಜನಾಂಗಗಳು ಪುರಾತನ ಕಾಲದಿಂದಲೂ ಬದಲಾವಣೆಗೆ ಹೊಂದಿಕೊಳ್ಳುತ್ತಾ ಬಂದಿದ್ದಾನೆ. ಬದಲಾವಣೆಗೆ ಒಗ್ಗದ ವ್ಯಕ್ತಿ, ಸಮಾಜ ಅಥವಾ ಸಮುದಾಯ ತನ್ನ ಅಸ್ಥಿತ್ವವನಗನು ಉಳಿಸಿಕೊಳ್ಳುವುದು ಕ್ಲಿಷ್ಟಕರವಾದ ಸಂಗತಿಯಾಗಿದೆ. ಸೂಕ್ಷ್ಮತೆಯಿಂದ ಸಂಕೀರ್ಣತೆಯೆಡೆಗೆ ಮತ್ತು ಏಕರೂಪತೆಯಿಂದ ವಿವಿಧತೆಯೆಡೆಗೆ ಸಮಾಜ ಸದಾ ಕಾಲ ಬದಲಾಗುತ್ತಿರುತ್ತದೆ. ಸಾಮಾಜಿಕ ಮತ್ತು ಆರ್ಥಿಕ ಪ್ರಕ್ರಿಯೆಗಳ ಮಾದರಿಗಳಾದ (ವಿನ್ಯಾಸಗಳಾದ) ಅಂತಕ್ರಿಯೆಗಳು ಸಂಘಟನೆಗಳಿಂದ ಭಿನ್ನತೆ ಹಾಗೂ ಮಾರ್ಪಾಡುಗಳಲ್ಲಿನ ಬದಾವಣೆಗಳು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳಾಗಿವೆ, ಇಂತಹ ಬದಲಾವನೇ ಭೌತಿಕ, ಜೈವಿಕ, ತಾಂತ್ರಿಕ, ಸಾಂಸ್ಕೃತಿಕ, ಶೈಕ್ಷಣಿಕ, ಕಾನೂನುಗಳು ಹಾಗೂ ಮತ್ತಿತರ ಅಂಶಗಳು ಒಟ್ಟಿಗೆ ಅಥವಾ ಬೇರೆ-ಬೇರೆ ಪರಿಪೇಕ್ಷಗಳ ಪ್ರಭಾವ ಬೀರುತ್ತದೆ.

ಭಾರತ ಸಂಸ್ಕೃತಿಯಲ್ಲಿ ನೆಲೆಗೊಂಡಿರುವ ವಿವಿಧ ಜಾತಿ, ಧರ್ಮ, ಮತ್ತು ಜನಾಂಗಗಳು ವಿಭಿನ್ನವಾದ ಗುಣಲಕ್ಷಣ, ಸಂಸ್ಕೃತಿ ಮತ್ತು ಧಾರ್ಮಿಕ ನಂಬಿಕೆಗಳ ಅಳವಡಿಸಿಕೊಂಡಿದ್ದು, ಒಂದು ಜಾತಿಯನ್ನು ಇನ್ನೊಂದು ಸಮುದಾಯಕ್ಕೆ ಹೋಲಿಸಿ ನೋಡಿದಾಗ ಅವುಗಳಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಧಾರ್ಮಿಕವಾಗಿ ಭಿನ್ನವಾಗಿರುವುದು ಕಾಣುತ್ತದೆ. ಪ್ರಸ್ತುತ ಲೇಖನದಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ ನೆಲೆಸಿರುವ ಬ್ಯಾಗಾರ ಸಮುದಾಯದ ಸಾಮಾಜಿಕ ವ್ಯವಸ್ಥೆಯನ್ನು ವಿಶ್ಲೇಶಿಲಾಗುವುದು (ಉಲ್ಲೇಖಿಸಲಾಗುವುದು).

**ಸೂಚನೆಗಳು:** ಬ್ಯಾಗಾರ ಸಮುದಾಯ, ಬ್ಯಾಗಾರ ಸಮುದಾಯದ ಸಾಮಾಜಿಕ ವ್ಯವಸ್ಥೆ, ಬ್ಯಾಗಾರರ ಕುಟುಂಬ ವ್ಯವಸ್ಥೆ, ಬ್ಯಾಗಾರ ಸಮುದಾಯದ ಮಹಿಳೆಯರ ಸ್ಥಾನಮಾನ, ಬ್ಯಾಗಾರರ ಬೆಡಗುಗಳು ಮತ್ತು

ಬ್ಯಾಗಾರರ ವಿವಾಹ ಪದ್ಧತಿ, ಬ್ಯಾಗಾರರ ಬಂಧುತ್ವ ವ್ಯವಸ್ಥೆ, ಬ್ಯಾಗಾರ ಸಮುದಾಯದ ಉಡುಗೆ-ತೊಡುಗೆಗಳು, ಬ್ಯಾಗಾರರ ಆಹಾರ ಪದ್ಧತಿ, ಶಿಕ್ಷಣ ಮತ್ತು ಆರ್ಥಿಕತೆ.

ರಾಯಚೂರು ಜಿಲ್ಲೆಯು ಕರ್ನಾಟಕದ ಉತ್ತರ ಭಾಗದಲ್ಲಿದ್ದು ೨೦೧೧ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೩,೬೦,೧೬೪ ಇದ್ದು ಇಲ್ಲಿಯ ಸಾಕ್ಷರತೆ ಪ್ರಮಾಣ ಶೇಕಡ ೫೦.೬ರಷ್ಟಿದೆ ಹಾಗೂ ತಾಲ್ಲೂಕಿನ ವಿಸ್ತೀರ್ಣವು ೧೫೬೭.೭೦ ಚದರ ಕಿಲೋ ಮೀಟರು ವಿಸ್ತೀರ್ಣವನ್ನು ಹೊಂದಿದೆ. ಸಿಂಧನೂರು ತಾಲೂಕಿನಲ್ಲಿ ಬ್ಯಾಗಾರ ಸಮುದಾಯದವರು ಪ್ರಸ್ತುತ ದಿನಮಾನಗಳಲ್ಲಿ ಸರ್ಕಾರಿ ನೌಕರರ ವಸ್ತುಗಳನ್ನು ಒತ್ತು ಸಾಗುವ ಪದ್ಧತಿ ಇಲ್ಲದಿದ್ದರೂ ಅವರನ್ನು ಬ್ಯಾಗಾರ ಎಂದು ಗುರುತಿಸಲಾಗಿದೆ ಈ ಸಮುದಾಯವು ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅತಿ ಹೆಚ್ಚಾಗಿ ಕಂಡು ಬರುತ್ತಾರೆ.

ಬ್ಯಾಗಾರರನ್ನು ಹೊಲೆಯರ ಒಂದು ಉಪಪಂಗಡ, ಹೊಲೆಯರಲ್ಲಿ ಬ್ಯಾಗಾರ ಸಮುದಾಯವು ಒಂದು ಎಂದು ಗುರುತಿಸಲಾಗಿದೆ. ಬ್ಯಾಗಾರ ಎಂಬ ಹೆಸರು ಬೀಗರ ಎಂಬ ಪದದಿಂದ ಬಂದಿದೆ. ಬೇಗ, ಬೇಗಾರಿ ಅಥವಾ ಬೀಗರ ಮತ್ತು ಬ್ಯಾಗಾರ ಎಂದರೆ ಸಂಬಳ ಇಲ್ಲದೆ ಗುಲಾಮರಂತೆ ಜೀತಾದಾಳು ಪದ್ಧತಿಯಂತೆ ಇವರನ್ನು ನೋಡುತ್ತಿದ್ದರು. ಎಂಬ ಅರ್ಥವನ್ನು ಕೊಡುತ್ತದೆ. ಇದು ಯಾವುದೇ ಸಂಬಳವಿಲ್ಲದೆ ಮಾಡುವಂತ ವೃತ್ತಿಯಾಗಿದೆ ಎಂದು ವ್ಯಾಖ್ಯಾನಿಸುತ್ತಾರೆ. ಹಲವು ಸಮಾಜಶಾಸ್ತ್ರಜ್ಞರು ಎಂದು ಅಭಿಪ್ರಾಯ ಪಟ್ಟಿದ್ದಾರೆ.೧ (ಕೆ ಎ ಸಿಂಗ್, ೨೦೦೩, ಸರಣಿ ೨೫, ಭಾಗ-೦೧, ಪುಸಂ ೩೫೭).

ಬ್ಯಾಗಾರ ಎಂದರೆ ಸಂಬಳವಿಲ್ಲದೆ ಉಚಿತವಾಗಿ ಅಥವಾ ಬ್ಯಾಗಾರ ಸೇವೆಸೇವೆ ಮಾಡುವ ಪದ್ಧತಿ ಇದು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾದ ಸ್ಥಾನಮಾನಗಳ ಆಧಾರದ ಮೇಲೆ ಎಲ್ಲಾ ಸಮುದಾಯಗಳ ಸಮಾನ ಪ್ರಾತಿನಿಧ್ಯತೆ ನೀಡಬೇಕೆಂಬ ಉದ್ದೇಶದಿಂದ ಜನಸಮುದಾಯಗಳನ್ನು ವಿವಿಧ ಮಾನದಂಡಗಳ ಆಧಾರದ ಮೇಲೆ ಸಾಮಾನ್ಯ ವರ್ಗ, ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ವರ್ಗ. ಅಲ್ಪಸಂಖ್ಯಾತ ಮುಂತಾದ ಗುಂಪುಗಳನ್ನಾಗಿ ವಿಭಾಗಿಸಿಕೊಂಡು ಅದರಂತೆ ಸಿಂಧನೂರು ತಾಲೂಕಿನಲ್ಲಿರುವ ಇವರನ್ನು ಪರಿಶಿಷ್ಟ ಜಾತಿ ಎಂದು ವರ್ಗೀಕರಿಸಲಾಗಿದೆ. ಈ ತಾಲೂಕನ್ನು ಹೊರತುಪಡಿಸಿ ರಾಜ್ಯದ ಇತರೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬ್ಯಾಗಾರ ಸಮುದಾಯದವರನ್ನು ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಿಸಲಾಗಿದೆ.

**ಕುಟುಂಬ ವ್ಯವಸ್ಥೆ**

ಸಾಮಾಜಿಕ ಸಂಘಟನೆಯ ಸಂಸ್ಕೃತಿಯ ಒಂದು ಭಾಗ. ಕುಟುಂಬ ಎಂಬುದು ಸಮಾಜದ ಒಂದು ಹೃದಯ ಭಾಗ ಅಥವಾ ಒಂದು ಘಟಕ. ಈ ಕುಟುಂಬ ವ್ಯವಸ್ಥೆ ಅಲ್ಲಿನ ಸದಸ್ಯರುಗಳಿಂದಲೇ ರೂಪಿತವಾದುದೇ ಆಗಿರುತ್ತದೆ. ಈ ಕುಟುಂಬಗಳಿಗೆ ಆಯಾ ಸಮಾಜದ ರೂಢಿ ಸಂಪ್ರದಾಯಗಳು, ಪರಂಪರೆಯಿಂದ ರೂಢಿಸಿಕೊಂಡು ಬಂದಿರುವ ರೀತಿ-ನೀತಿಗಳು, ನಿಯಮಗಳ ನಿಷೇಧಗಳು ಪ್ರಮುಖವಾಗಿ ಪರಿಪಾಲನೆ

ಮಾಡುತ್ತವೆ. ಮಾನವನು ತನ್ನ ಹಲವಾರು ಮೂಲಭೂತ ಬದುಕುಗಳನ್ನು ಈಡೇರಿಸಿಕೊಳ್ಳಲು ಅನೇಕ ಸಾಮಾಜಿಕ ಸಂಸ್ಥೆಗಳನ್ನು ರೂಪಿಸಿಕೊಳ್ಳಲಾಗಿದೆ. ಈ ಸಂಸ್ಥೆಗಳಲ್ಲಿ ಪ್ರಧಾನ ಘಟಕವೆಂದರೆ ಕುಟುಂಬವು ಪ್ರಮುಖವಾದದು. ಮಾನವ ಸಮಾಜಕ್ಕೆ ಪ್ರಾಥಮಿಕ ಸಂಘವಾದ ಕುಟುಂಬವೇ ಮೂಲ ಆಧಾರ. ಕುಟುಂಬವು ಸಣ್ಣ ಸಾಮಾಜಿಕ ಸಂಸ್ಥೆಯಾಗಿದ್ದರೂ, ಅದು ಮೂಲ ಸಂಸ್ಥೆ. ಸಮಾಜದ ಎಲ್ಲಾ ಸಂಸ್ಥೆಗಳು ಅದರ ಆಧಾರ ಸ್ತಂಭಗಳಂತೆ ಕಾರ್ಯ ನಿರ್ವಹಿಸುತ್ತವೆ. ಕುಟುಂಬದ ಸದಸ್ಯರೇ ಸಮಾಜದ ಇತರೇ ಸಂಸ್ಥೆಗಳ ಸದಸ್ಯರು. ಕುಟುಂಬ ಪ್ರಪಂಚದಾದ್ಯಂತ ವ್ಯಾಪಕವಾದದ್ದು, ಕುಟುಂಬ ಇಲ್ಲದಿದ್ದರೇ ಯಾವ ಸಮಾಜವು ಅಸ್ಥಿತ್ವದಲ್ಲಿರುತ್ತಿರಲಿಲ್ಲ.

ಕುಟುಂಬವನ್ನು ಐತಿಹಾಸಿಕ ದೃಷ್ಠಿಯಿಂದ ಗಮನಿಸಿದಾಗ, ಬ್ಯಾಗಾರ ಸಮುದಾಯವು ಕಾಲಕ್ರಮೇಣ ಸ್ವಯಂ ಪರಿಪೂರ್ಣತೆಯನ್ನು ಪಡೆದು ಸಾಮಾಜಿಕ ಜೀವನದ ಬೇರೆ-ಬೇರೆ ಕ್ಷೇತ್ರಗಳನ್ನು ಆವರಿಸಿಕೊಂಡಿದ್ದು, ಆಧುನಿಕ ಸಮಾಜದಲ್ಲಿ ಅವರ ಪ್ರಭಾವ ಕಡಿಮೆಯಾಗುತ್ತಿದೆ ಎಂಬ ವಿಚಾರ ಭಾಸವಾಗುತ್ತದೆ ಅಥವಾ ವ್ಯಕ್ತವಾಗುತ್ತದೆ. (ಎಡ್ಗರ್ ರ್ಸ್ಟನ್ ೧೯೦೯).

ಕರ್ನಾಟಕದಲ್ಲಿ ಬ್ಯಾಗಾರರು ಒಂದು ಒಳಬಾಂಧವ್ಯದ ಗುಂಡಿ ಸೇರುತ್ತಿದೆ. ಎಂದು ಉಲ್ಲೇಖಿಸಿರುತ್ತಾರೆ. ಅನೇಕ ಬ್ಯಾಗಾರ ಕುಟುಂಬಗಳು ವಿಭಕ್ತ ಕುಟುಂಬಗಳಾಗಿರುತ್ತವೆ. ಅವುಗಳಲ್ಲಿ ಕೆಲವೊಂದು ಅವಿಭಕ್ತ ಕುಟುಂಬಗಳಾಗಿ ಬೇರೆ ಬೇರೆ ಕಡೆ ನೆಲೆಸಿರುತ್ತಾರೆ. ಅವರ ಜೀವನಾವರ್ತನ ಸಂಸ್ಕಾರಗಳು ಮತ್ತು ಆಚರಣೆಗಳು ಆಯಾ ಪ್ರಾದೇಶಿಕತೆ, ಸ್ಥಳೀಯ ಇತರ ಸಮುದಾಯಗಳ ರೀತಿಯಲ್ಲಿರುತ್ತವೆ. ಎಂದು ಎಡ್ಗರ್ ರ್ಸ್ಟನ್ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಕರ್ನಾಟಕದಲ್ಲಿರುವ ಇರುವ ಬ್ಯಾಗಾರರು ಮಾತನಾಡಲು, ಓದಲು ಮತ್ತು ಬರೆಯಲು ಕನ್ನಡವನ್ನು ಬಳಸುತ್ತಾರೆ. ಬ್ಯಾಗಾರ ಸಮುದಾಯದಲ್ಲಿ ವಿಚ್ಛೇದನ ಪಡೆಯಲು ಪುರುಷರಿಗೆ ಮಾತ್ರ ಅವಕಾಶವಿರುತ್ತದೆ. ಮತ್ತು ಸ್ತ್ರೀÃಯರು ತಮ್ಮ ಪತಿಗೆ ವಧುವಿನ ಬೆಲೆ ಬಾಳುವ ವಸ್ತುಗಳನ್ನು ಹಿಂದುರಿಸಬೇಕಾಗಿತ್ತು, ಇವರ ವೈವಾಹಿಕ ಸಂಬಂಧಗಳ ಅಂತ್ಯವನ್ನು ಸೂಚಿಸುತ್ತದೆ. ವಿಚ್ಛೇದನೆಯ ಸಂದರ್ಭದಲ್ಲಿ ಎಲ್ಲಾ ಜೀವಂತ ಮಕ್ಕಳು ತಂದೆಯ ಜವಾಬ್ದಾರಿಯಾಗಿರುತ್ತಾರೆ.

ಬ್ಯಾಗಾರರಲ್ಲಿ ಸಾಮಾಜಿಕ ವಿಭಜನೆಯು ಕೆಳಮಟ್ಟದಲ್ಲಿರುತ್ತದೆ. ಪೋತರಾಜ ಮತ್ತು ಯಡ್ಲೊಳ್ಳಿಯಂತಹ ಕೆಲವು ಪಿತೃವಂಶದ ಕುಲಗಳಿವೆ. ವೈವಾಹಿಕ ಸಂಬಂಧಗಳನ್ನು ನಿಯಂತ್ರಿಸುವುದು. ಈ ಕುಲಗಳ ಮುಖ್ಯ ಕಾರ್ಯವಾಗಿದೆ ಹಾಗೂ ಬ್ಯಾಗಾರ ಸಮುದಾಯದಲ್ಲಿ ಏಕಪತ್ನಿತ್ವ ವ್ಯವಸ್ಥೆಯನ್ನು ಹೊಂದಿದೆ ಎಂದು ಹೇಳಬಹುದಾಗಿದೆ.

**ಮಹಿಳೆಯರ ಸ್ಥಾನಮಾನ**

ಬ್ಯಾಗಾರ ಸಮುದಾಯದಲ್ಲಿ ಮಹಿಳೆಯರು ಸಾಮಾಜಿಕ ಧಾರ್ಮಿಕ ಮತ್ತು ಸಾಂಸಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ ಮತ್ತು ಕೌಟುಂಬಿಕ ವಿಷಯಗಳಲ್ಲಿ ಅವರ ಸಲಹೆ ಸೂಚನೆಗಳನ್ನು ಸ್ವಿಕರಿಸಲಾಗುತ್ತದೆ. ಮಹಿಳೆಯರು ಕೃಷಿ ಕೂಲಿ ಕೆಲಸ ಮಾಡುವ ಮೂಲಕ ಕುಟುಂಬದ ಆದಾಯಕ್ಕೆ ನೀಡುತ್ತಾರೆ. ಮಹಿಳೆಯರು ತಮ್ಮ ಮನೆಗಳಿಗೆ ಇಂಧನ ಮತ್ತು ಮೇವು ಸಂಗ್ರಹಿಸುತ್ತಾರೆ. ಅವರು ಎಲ್ಲಾ ದೇಶಿದ ಕರ್ತವ್ಯ ಹಾಗೂ ಸ್ಥಳೀಯ ಕಾರ್ಯವೈಖರಿಯನ್ನು ನಿರ್ವಹಿಸುತ್ತಾರೆ.

ಬ್ಯಾಗಾರ ಸಮುದಾಯದ ಮಹಿಳೆಯರ ಗರ್ಭಧಾರಣೆಯು ೭ನೇ ತಿಂಗಳಲ್ಲಿ ಪ್ರಸವಪೂರ್ವ ಆಚರಣೆಯನ್ನು ಈ ಸಮುದಾಯದ ಮಹಿಳೆಯರಿಗಾಗಿ ಆಚರಿಸುವಂತಹ ಸಂಪ್ರಾದಾಯವಾಗಿದೆ. ಈ ಸಂಭರ್ಧದಲ್ಲಿ ಮಹಿಳೆಯರಿಗೆ ಹೊಸ ಸೀರೆಯನ್ನು ಕೋಡುತ್ತಾರೆ. ಪ್ರಸವ ನಂತರದಲ್ಲಿ ಮಹಿಳೆಯರು ತವರು ಮನೆಗೆ ಕರೆದುಕೊಂಡು ಹೋಗುತ್ತಾರೆ. ಈ ಸಮಾರಂಭವನ್ನು ಸಿಮಾಂತ ಕಾರ್ಯಕ್ರಮ ಎಂತಲೂ ಕರೆಯುತ್ತಾರೆ. ಅದೇ ರೀತಿಯಾಗಿ ಬ್ಯಾಗಾರ ಸಮುದಾಯದ ಹುಡುಗಿ ಪ್ರೌಢವಸ್ಥೆಗೆ ಬಂದಾಗ ಅವಳನ್ನು ಒಂಬತ್ತು ಅಥವಾ ಹನ್ನೊಂದು ದಿನಗಳವರೆಗೆ ಮನೆಯ ಒಂದು ಮೂಲೆಯಲ್ಲಿ ಕೂರಿಸಲಾಗುತ್ತದೆ. ಕೊನೆಯ ದಿನ ಜಂಗಮ ಅಥವಾ ಪೂಜಾರಿಯು ಮನೆಯ ಸುತ್ತಲೂ ಗೋಮೂತ್ರವನ್ನು ಸಿಂಪಡಿಸುವ ಮೂಲಕ ಮನೆಯ ಪರಿಸರವನ್ನು ಶುದ್ಧೀಕರಣವನ್ನು ಮಾಡುತ್ತಾನೆ. ಪ್ರಸ್ತುತ ಈ ರೀತಿಯ ಸಂಪ್ರಾದಾಯಗಳು ಇಂದಿಗೂ ಸಿಂಧನೂರು ತಾಲ್ಲೂಕಿನ ಬ್ಯಾಗಾರ ಸಮುದಾಯಗಳಲ್ಲಿ ಆಚರಿಸಲಾಗುತ್ತದೆ ಈಗಲೂ ಕಾಣಬಹುದಾಗಿದೆ.

**ಬ್ಯಾಗಾರರ ಬೆಡಗುಗಳು ಮತ್ತು ಬ್ಯಾಗಾರರ ವಿವಾಹ ಪದ್ಧತಿ**

ಬ್ಯಾಗಾರ ಸಮುದಾಯದ ವಿವಾಹ ಪದ್ಧತಿಯಲ್ಲಿ ಬೆಡಗುಗಳು ಮತ್ತು ಕುಲಗಳು ಮಹತ್ವದ ಪಾತ್ರವಹಿಸುತ್ತವೆ. ಬ್ಯಾಗಾರರಲ್ಲಿ ಹಲವಾರು ಬೆಡಗುಗಳನ್ನು ಕಾಣಬಹುದು ಅವುಗಳೇಂದರೆ

ಗಂಟೇಲೇರು, ದಳವಾಯಿ, ತೋಡೆಲು (ತೋಡೆಲರು), ಬಿಚ್ಚಳಿ (ಬಿಚ್ಚಳಿಯವರು), ಚೇಗಿರಿಯರು, ಬಂಡಾರದವರು, ಸಣ್ಣ ಹುಲಿಯವರು, ಮಲ್ನೆಡೆಯವರು, ಬಂಡೇಲೇರು, ಜೋಡು ಮದ್ಲಿಯವರು, ಬನ್ನೇಲವರು, ಮಿಂಚುಲೋೕರು, ಮದ್ಲಿಯವರು, ಬಲ್ಲೇಯರು, ಲಾಲ್‌ಸಾರಿ, ಹೇಮರೆಡ್ಡಿಯವರು, ಕೇಸರಡ್ಡಿ, ಕೋಗಿಲೆಯವರು, ಹೂ ಮಂಡಲ, ಒಂದು ಬಟ್ಲದವರು (ಹೊನ್ನಾಬಟ್ಲಾದವರು), ಕೌಶಲ್ಯನವರು, ಹಾವಲಿಯವರು, ಹಾಲದವರು, ಮೀರಿದವರು, ನೀರುಮುನಿಯವರು, ಕಟ್ಟಿಮನೆ, ಗೊವಿಂದನವರು, ಜವಳದವರು, ಕಂಟ್ಲೇರು, ಕಂಟ್ಲೇರು, ಕೋಗಿಲೇರು, ಕೇಸರಡ್ಡಿ (ಕೇಸರೆಡ್ಡಿ), ಕಟ್ಟಿಮನಿ, ಗೋವಿಂದನವರು, ಜವಳದವರು, ಚೆಗಿರಿಯವರು (ಚೆಗಿರೇರು), ಕ್ಯಾದಿಗೇರು, ಬಂಡಾರದವರು, ಜೋಡುಮದ್ಲಿಯವರು, ಸಣ್ಣ ಹುಲೇರು, ಕೆಂಗಲ್ಲೋರು, ರೌಡೂರು ಕಟ್ಟೆಮನಿಯವರು, ಕ್ಯಾದ್ಯಾಳಾ ಕಟ್ಟೆಮನಿಯವರು, ಕ್ವಾಡ್ಯಾಳಾ ಕಟ್ಟೆಮನಿಯವರು, ಮೂಲೆಮನೆಯವರು, ಬಲಕುಂದೋರ್ (ಬಲಕುಂದಿಯೋರ್), ಬ್ಯಾಟೇಲೇರು,

ತಳಕಲ್ಲೋರು, ಹೊನ್ನಾಮದ್ಲಿಯವರು, ಐಕೇಲೇರು, ಸೇಟ್ಟೆಲೇರು, ಬಜ್ಜಿಲೋರ್, ಅರಿವಾಲದವರು, ಗೋಪಾಳದವರು, ಕಶೇಲೇರ್ (ಕಾಶೇಲೇರು), ಕೋರಿಯರ್ (ಕೋರಿಯೋರು), ಗಡ್ಡದವರು (ಗಡ್ಡದೋರ್), ಎಲಿಬಿನೇರ್ (ಎಲಿಬಿನವರು), ಬಂಡಾರಿಯೋರ್, ಎಮ್ಮೆಲೇರು (ಎಮ್ಮುಲೋರು), ಎನಿಮಿಲೋರು (ಎನಿಮಿನೇರು), ಕಾಚಲೇರು, ಬನ್ನೆಲೇಯರು, ಬಂಗಾರದವರು, ಕೋಡ್ಲೇಯರು (ಕೋಡ್ಲೇರ್), ಜವೆಂದರು, ಬಂಡರ್ದರ್ ಅಥವಾ ಬಂಡಾರ್ದೋರ್ (ಬಂಡಾರದವರು) (ಬಂಡಾರಿಯವರು), ಮದ್ಯರು, ಹಾಗೂ ಬಿಂದಿಗೇರ್ (ಬಿಂದಿಗೆಯರು).

ಇವುಗಳಲ್ಲಿ ಪ್ರಮುಖವಾದವುಗಳೆಂದರೆ ದಳವಾಯಿ, ಲಾಲ್‌ಸಾರಿ, ಗಂಟೇಲೇರು, ಕೇಸರಡ್ಡಿ ಹಾಗೂ ಹೇಮರೆಡ್ಡಿಯವರು ಎಂದು ಹೇಳಬಹುದು ನಾವೂ ಶ್ರೇಷ್ಠ ಕುಲದವರು ಎಂದು ಇವರು ಹೇಳಿಕೊಳ್ಳುತ್ತಾರೆ. ಹಾಗೂ ಇನ್ನೂ ಮುಂತಾದವುಗಳು ಸಹ ಕಾಣಬಹುದಾಗಿದೆ. ಇವರಲ್ಲಿಯೂ ಕೂಡ ಇತರರಂತೆ ಒಂದೇ ಕುಲದಲ್ಲಿ ಅಥವಾ ಬೆಡಗುಗಳಲ್ಲಿ ವಿವಾಹ ಸಂಬಂಧ ಏರ್ಪಾಡುವುದಿಲ್ಲ. ಏಕೆಂದರೆ ಒಂದೇ ಕುಲ ಅಥವಾ ಬೆಡಗು ಹೊಂದಿರುವ ವ್ಯಕ್ತಿ ಮತ್ತು ಕುಟುಂಬಗಳು ಒಂದೇ ಪಿತೃವಂಶಕ್ಕೆ ಸೇರಿದವರಾಗಿರುತ್ತಾರೆ ಎಂದರ್ಥ. ಸಾಮಾನ್ಯವಾಗಿ ಸೋದರ ಮಾವನ ಮಗ ಅಥವಾ ಸೋದರ ಮಾವನ ಮಗಳು ಮತ್ತು ಅಕ್ಕನ ಮಗಳ ನಡುವೆ ವಿವಾಹವನ್ನು ಏರ್ಪಡಿಸುತ್ತಾರೆ. ಹುಡುಗ-ಹುಡುಗಿಯ ಆಯ್ಕೆಯ ಮುಖ್ಯ ಮಾನದಂಡ ಜಾತಿ, ಇವರ ನಡುವೆ ಅಂತರ್‌ಜಾತಿಯ ವಿವಾಹ ಅಪರೂಪವಾಗಿದೆ. ಇವರು ವಿವಾಹವನ್ನು ಶಿವಾ ಪಾರ್ವತಿಯ ಮದುವೆಯ ಪವಿತ್ರತೆಗೆ ಹೋಲಿಸುವಂತೆ ವಿವಾಹವನ್ನು ಮಹಾಸುದಿನವೆಂದು ಭಾವಿಸುತ್ತಾರೆ. ಬ್ಯಾಗಾರ ಸಮುದಾಯದ ಗಂಡು ಮತ್ತು ಹೆಣ್ಣಿನ ಗಣಕೂಟ ಸಹೋದರರೇ ವಿವಾಹ ಏರ್ಪಾಡಿಸುತ್ತಾರೆ. ಇಲ್ಲವಾದರೆ ದೇವರ ಕಾಣಿಕೆಯನ್ನು ಅಥವಾ ದೇವರ ಅಪ್ಪಣೆಯನ್ನು ಪಡೆದು ಅಥವಾ ದೇವರ ಹೂ ಪಡೆದು ವಿವಾಹ ನಡೆಸುತ್ತಾರೆ. ಒಂದು ಪಕ್ಷದಲ್ಲಿ ಹೂ ಹಾಗೂ ಗಣಕೂಟ ಸರಿಇಲ್ಲವಾದರೇ ವಿವಾಹ ನಡೆಯುವುದಿಲ್ಲ ಎಂದು ಹೇಳುತ್ತಾರೆ. ಬ್ಯಾಗಾರ ಸಮುದಾಯದವರಲ್ಲಿ ಗಂಡು ಮತ್ತು ಹೆಣ್ಣು ಆಯ್ಕೆಯಾದರೆ ತಮ್ಮ ಜನಾಂಗದ ಹಿರಿಯರ ನೆರವು ಪಡೆದು ಅವರ ಮುಖಂಡತ್ವದಲ್ಲಿ ಮದುವೆಯನ್ನು ಮಾಡುತ್ತಾರೆ. ಪ್ರಸ್ತುತ ಬ್ಯಾಗಾರ ಸಮುದಾಯದಲ್ಲಿ ಈ ವಿವಾಹದ ರೂಪರೇಷಗಳು ಕಾಲಕ್ರಮೇಣ ನಶೀಸಿಹೋಗುವ ಹಂತಕ್ಕೆ ಬಂದಿದೆ. ಮದುವೆಗೆ ಒಂದು ಶುಭ ದಿನವನ್ನು ಗೋತ್ತು ಪಡಿಸಿ, ನಂತರ ಸಮುದಾಯದ ಹೀರಿಯರ (ಯಜಮಾನರು) ಮುಂದಾಳತ್ವದಲ್ಲಿ ಸಂಪ್ರದಾಯಿಕವಾಗಿ ವಿವಾಹ ನೆರವೇರಿಸುತ್ತಾರೆ.

**ಬ್ಯಾಗಾರರ ಬಂಧುತ್ವ ವ್ಯವಸ್ಥೆ**

ಚಾರ್ಲ್ಸರ್ ವಿನಿಕ್ ಅವರ ಪ್ರಕಾರ: "ರಕ್ತ ಸಂಬಂಧವು ಒಂದು ಸಾಮಾಜಿಕವಾಗಿ ಗುರುತಿಸ್ಪಟ್ಟಿದೆ, ಊಹೆಯ ಅಥವಾ ನಿಜವಾದ ವಂಶಾವಳಿಯಾಗಿರುತ್ತದೆ" ಅದೇ ರೀತಿಯಾಗಿ ಮುಜುಮ್‌ದಾರ್ ಪ್ರಕಾರ: "ಎಲ್ಲಾ ಸಮುದಾಯಗಳಲ್ಲಿ ವಿವಿಧ ಗುಂಪುಗಳಾಗಿ ವಿವಿಧ ಬಂಧನಗಳಿಂದ ಜನರು ಒಂದು ಗೂಡುತ್ತಾರೆ. ಈ

ಸಾರ್ವತ್ರಿಕ ಬಂಧನವು ಮಾನವನ ಸಹಜವಾದ ಪುನರ್ ಉತ್ಪಾದನೆಯ ಮೇಲೆ ಅವಲಂಬಿಸಿದೆ" ಎಂದು ಹೇಳಿದ್ದಾರೆ. ಬ್ಯಾಗಾರ ಸಮುದಾಯದವರು ತಮ್ಮ ಪ್ರಾಥಾಮಿಕ ಸಂಬಂಧಗಳಿಂದ ತಂದೆ-ತಾಯಿಯರನ್ನು, ಅಪ್ಪ-ಅಮ್ಮ, ಎಂಬ ಪದಗಳಿಂದ ಸಂಭೋದಿಸುತ್ತಾರೆ. ದ್ವಿತಿಯ ಸಂಬಂಧಗಳನ್ನು ಹಿರಿಯರಿಗೆ ಅಥವಾ ಚಿಕ್ಕ ಎಂಬ ಪದಗಳನ್ನು ಉಪಯೋಗಿಸುತ್ತಾರೆ. ತಂದೆಯ ಅಣ್ಣ ಅಥವಾ ತಮ್ಮ ತಾಯಿಯ ಅಕ್ಕ ಅಥವಾ ತಂಗಿಯ ಗಂಡ, ತಂದೆಯ ಅಣ್ಣ ಅಥವಾ ತಮ್ಮನ ಹೆಂಡತಿ ಮತ್ತು ತಾಯಿಯ ಅಕ್ಕ ಅಥವಾ ತಂಗಿ ಇವರನ್ನು ದ್ವಿತಿಯ ಸಂಬಂಧಗಳು ಎಂದು ಕರೆಯಲಾಗುತ್ತಿದೆ. ಹೆಂಡತಿಯ ತಂಗಿಯ ಗಂಡನನ್ನು 'ಸಡಕ' ಎಂಬ ಪದದಿಂದ ಸಂಬೋಧಿಸುತ್ತಾರೆ ಎಂದು ಹೇಳಲಾಗುತ್ತದೆ. ಗಂಡ-ಹೆಂಡತಿಯ ತಂದೆ ತಾಯಿಯನ್ನು ಕ್ರಮವಾಗಿ ಬೀಗರು (ಗಂಡಸಿಗ) ಮತ್ತು ಬೀಗತಿ (ಹೆಂಗಸಿಗೆ) ಎಂದು ಕರೆಯುತ್ತಾರೆ.

**ಬ್ಯಾಗಾರ ಸಮುದಾಯದ ಉಡುಗೆ-ತೊಡುಗೆಗಳು**

ಮೊದಲು ಬ್ಯಾಗಾರರು ಪುರುಷರು, ಹತ್ತಿ ಬಟ್ಟೆಯನ್ನು ಧರಿಸುವ ವಾಡಿಕೆಯಿತ್ತು, ಪುರುಷರು ಬಿಳಿ ಲುಂಗಿ ಅಥವಾ ಜುಬ್ಬಾ, ಶಾಲು, ಟೋಪಿ ಅಥವಾ ಬಟ್ಟೆಯನ್ನು ಶಿರಸ್ತುಣವಾಗಿ ಧರಿಸುತ್ತಾರೆ. ಸಾಂಪ್ರದಾಯಿಕವಾಗಿ ಸೀರೆ ಮತ್ತು ರವಿಕೆಯು ಮಹಿಳೆಯರು ದಿನನಿತ್ಯದ ಉಡುಪಾಗಿತ್ತು, ಆದರೆ ಮಹಿಳೆಯರು ತಮ್ಮ ಕಿವಿಯ ಹೊಲೆಗಳಲ್ಲಿ ಐದು ಅಥವಾ ಏಳು ಕಿವಿಯೋಲೆಗಳನ್ನು ಅಲಿಕಾಟ್ ಎಂದು ಕರೆಯುತ್ತಾರೆ.೬ ಆದರೆ ನಗರ ಪ್ರದೇಶದ ಮಹಿಳೆಯರು ಇದನ್ನು ಧರಿಸುವುದಿಲ್ಲ ಎಂಬುದು ಕಂಡು ಬಂದಿದೆ.

**ಬ್ಯಾಗಾರರ ಆಹಾರ ಪದ್ಧತಿ**

ಬ್ಯಾಗಾರ ಸಮುದಾಯದ ಆಹಾರ ಪದ್ಧತಿಯನ್ನು ಗಮನಿಸಿದರೆ ಇವರಲ್ಲಿ ಬಹುಪಾಲು ಜನರು ಮಾಂಸಹಾರಿಗಳಾಗಿದ್ದು, ಕೆಲವರು ಮಾತ್ರ ಸಸ್ಯಹಾರಿಗಳಾಗಿದ್ದಾರೆ. ತಮ್ಮ ಆಹಾರಕ್ಕಾಗಿ ರಾಗಿ, ಜೋಳ, ಅಕ್ಕಿ, ಗೋಧಿ ಹಾಗೂ ಧವಸ ಧಾನ್ಯಗಳನ್ನು ಬಳಸುತ್ತಾರೆ. ಬ್ಯಾಗಾರರು ತಮ್ಮ ಸಂಪ್ರದಾಯಿಕ ಜಾತಿಯನ್ನು ಹೊಂದಿದ್ದಾರೆ. ಅದರಲ್ಲಿ ಮಾದಿಗರನ್ನು ಹೊರತು ಪಡಿಸಿ ಸ್ಥಳೀಯ ಪ್ರದೇಶದ ಎಲ್ಲಾ ಸಮುದಾಯಗಳಿಂದ ನೀರು ಮತ್ತು ಬೇಯಿಸಿದ ಆಹಾರವನ್ನು ಸ್ವೀಕರಿಸುತ್ತಾರೆ. ಅವರು ಹೊಲೆಯ ಮತ್ತು ಹೊಲೆಯ ದಾಸರಿಯೊಂದಿಗೆ ನೀರು ಮತ್ತು ಬೇಯಿಸಿದ ಆಹಾರವನ್ನು ವಿನಿಮಯ ಮಾಡಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ.

**ಶಿಕ್ಷಣ ಮತ್ತು ಆರ್ಥಿಕತೆ**

ಬ್ಯಾಗಾರರಲ್ಲಿ ಶೈಕ್ಷಣಿಕ ಸ್ಥಿತಿಗತಿಗಳನ್ನು ಗಮನಿಸಿದಾಗ ಹಿಂದೆ ಇವರಲ್ಲಿ ಸಾಕ್ಷರತಾ ಪ್ರಮಾಣ ತುಂಬಾ ಕಡಿಮೆಯಿತ್ತು. ಇತ್ತಿಚ್ಚಿಗೆ ಸರ್ಕಾರದ ಪ್ರಯತ್ನದಿಂದಾಗಿ ಶೈಕ್ಷಣಿಕ ಕ್ಷೇತ್ರವನ್ನೊಳಗೊಂಡಂತೆ ಇತರ

ಕ್ಷೇತ್ರದಲ್ಲಿಯೂ ಕೂಡ ಬದಲಾವಣೆಯನ್ನು ಕಾಣಬಹುದಾಗಿದೆ. ಇವರು ಧಾರ್ಮಿಕ ದೇವಾಲಯಗಳಿಗೆ ಭೇಟಿ ನೀಡುತ್ತಾರೆ. ಸೇವೆಗಳನ್ನು ಸ್ವೀಕರಿಸುವುದು ಮತ್ತು ಸಲ್ಲಿಸುವುದು, ಮತ್ತು ಗ್ರಾಮಗಳಲ್ಲಿ ಸಾವು ಸಂಭವಿಸಿದಾಗ ಬ್ಯಾಗಾರ ಸಮುದಾಯದ ಜನರು ಶವವನ್ನು ಹೂಳಲು ಹಾಗೂ ಗುಂಡಿ ತೊಡಲು ಇವರಿಗೆ ಅಹ್ವಾನಿಸುತ್ತಾರೆ. ಅದಕ್ಕಾಗಿ ಇವರಿಗೆ ಹಣ ಮತ್ತು ಬಟ್ಟೆಯನ್ನು ಪಡೆಯುತ್ತಾರೆ. ಕೇಲವು ಕೆಳ ಹಂತದ ಉದ್ಯೋಗಗಳನ್ನು ಪಡೆಯುತ್ತಾರೆ. ಪ್ರಸ್ತುತ ದಿನಗಳಲ್ಲಿ ಸಂಪ್ರದಾಯಿಕ ಸೇವೆಗಳಿಂದ ಬದಲಾವಣೆಗೊಂಡು. ಹೊಸ ವೃತ್ತಿಯನ್ನು ಅವಲಂಬಿಸಿರುತ್ತಾರೆ ಎಂಬುದು ಕಂಡು ಬಂದಿದೆ. ಕೆಲವು ಬ್ಯಾಗಾರ ಸಮುದಾಯದ ಹುಡುಗರು ಪ್ರೌಢ ಶಿಕ್ಷಣದವರೆಗೆ ಓದಿರುತ್ತಾರೆ. ಬಡತನ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಅನೇಕರು ಶಾಲೆಗಳನ್ನು ಬಿಡುತ್ತಾರೆ. ಮತ್ತೆ ಕೆಲವರು ಅವರ ಹಣಕಾಸಿನ ಅಗತ್ಯಗಳಿಗಾಗಿ ಅಂಗಡಿ ಹಾಗೂ ಸಣ್ಣ-ಪುಟ್ಟ ಕೈಗಾರಿಕೆಗಳಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಿರುವುದು ಕಂಡು ಬಂದಿದೆ. ಅಂತಹ ಖಾಸಗಿ ಕೆಲಸಗಳನ್ನೇ ಅವಲಂಬಿಸಿಕೊಂಡು ಬದುಕುತ್ತಿರುವುದನ್ನು ಕಾಣಬಹುದು. ಯುವಕರು ಇಂದು ಬೇರೆ ಬೇರೆ ವೃತ್ತಿಗಳಲ್ಲಿ ತೋಡಗಿಕೊಂಡಿರುವುದನ್ನು ಗಮನಿಸಲಾಗಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಬ್ಯಾಗಾರ ಸಮುದಾಯದಲ್ಲಿ ಮೇಲಿನ ಅಂಶಗಳನ್ನು ಅವಲೋಕಿಸಿದಾಗ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಬ್ಯಾಗಾರ ಸಮುದಾಯದವರ ಸಾಮಾಜಿಕ ವ್ಯವಸ್ಥೆ ಮತ್ತು ತಾಲ್ಲೂಕಿನಲ್ಲಿರುವ ಇರತ ಸಮುದಾಯದ ನಡುವಿನ ಸಾಮಾಜಿಕ ವ್ಯವಸ್ಥೆಯ ಸಾಮ್ಯತೆ ಇರುವುದನ್ನು ಗುರುತಿಸಬಹುದಾಗಿದೆ. ಹಾಗೆಯೇ ವಿಶೇಷ ಸ್ಥಾನಮಾನಗಳನ್ನು ಸಹ ಗಮನಿಸಬಹುದಾಗಿದೆ.

ಆಧಾರ ಗ್ರಂಥಗಳು


1. Singh k s., 2003, People of Indis (Andhra Pradesh), Vol 13, Part 1, Anthropological servey of India, Affiliated East-West Press pvt ltd New Delhi.
2. Singh k s., 2003, People of India (Karnataka), Vol 14, Part 1, Anthropological servey of india, Affiliated East-West Press Pvt Ltd New Delhi.
3. Padmanabha P., 1961, Ethnographic Notes on Scheduled Castes And Scheduled Tribes, Vol 11, Part V-B, of the Indian Administrative Service, Director of Census Operations, Mysore.